ದಿನಾಂಕ 22-12-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲುಃ ಶ್ರೀ. ಎಸ್ ಆರ್ ಎಸ್. ಎದುರುದಾರರ 2 ಮತ್ತು 3 ರ ಪರ ವಕೀಲರಿಂದಃ-**

22) ನನ್ನ ಅತ್ತೆ ಮಾವ ಇಬ್ಬರಿಗೂ ಸಕ್ಕರೆ ಖಾಯಿಲೆ ಇದೆ ಎಂದರೆ ಸರಿಯಲ್ಲ. ಅವರಿಬ್ಬರಿಗೂ ಬಿ.ಪಿ. ಖಾಯಿಲೆ ಇದೆ ಅದು ಹೆಚ್ಚು ಕಡಿಮೆ ಆಗುತ್ತಿರುತ್ತದೆ ಎಂದರೆ ಸರಿಯಲ್ಲ. 4 ನೇ ಎದುರುದಾರರ ಪೂರ್ತಿ ಹೆಸರು ನಾಗಮಣಿ ಅಲಿಯಾಸ್ ಅಕ್ಷಯ. ಅವರ ಹೆಸರು ನಾಗಮಣಿ ಅಲ್ಲ ನಾಗವೇಣಿ ಎಂದರೆ ಸರಿಯಲ್ಲ. ಅವರು ಈಗಲೂ ಸಹ ವಕಿಲೀಲ ವೃತಿ ಮಾಡುತ್ತಿದಾರೆ ಎಂದರೆ ಸರಿ. ನಾವಿಬ್ಬರೂ ಕಷ್ಟ ಸುಖ ಹಂಚಿಕೊಳುತ್ತಿದ್ದೆವು ಎಂದರೆ ಸರಿಯಲ್ಲ. ಎಲ್ಲ ಗೊತ್ತುತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದಿರೆಂದರೆ ಸರಿಯಲ್ಲ.

23) ನನ್ನ ಮಾವನ ತಂದೆಯ ಹೆಸರು ನನಗೆ ಗೊತ್ತು. ಅದೆಂದರೆ ರವಣಪ್ಪ. ಅವರ ಹೆಸರನ್ನು ನೀವು ನಿಮ್ಮ ಅರ್ಜಿಯಲ್ಲಿ ಕಾಣಿಸಿಲ್ಲ ಎಂದರೆ ಸರಿಯಲ್ಲ. ಅವರ ತಂದೆಯ ಹೆಸರು ನನಗೆ ಗೊತ್ತಿಲ್ಲ, ಈಗ ತಿಳಿದುಕೊಂಡುಬಂದು ಜಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

24) ನಾನು ಅವರ ಮನೇಯಲ್ಲಿ ಕೇವಲ 3 ದಿನಗಳ ಕಾಲ ಮಾತ್ರ ಇದ್ದೆ ಆದ್ದರಿಂದ ನನಗೆ ಏನು ಗೊತ್ತಿಲ್ಲ ಎಂದರೆ ಸರಿಯಲ್ಲ.

25) ಎದುರುದಾರರ ಮನೆಯಲ್ಲಿ ಎಷ್ಟು ಜನ ಇದ್ದಾರೆ ಎಂದರೆ ನನಗೆ ಗೊತ್ತು. ಅವರ್ಯಾರು ಎಂದರೆ ಸಾಕ್ಷಿಯು ನನ್ನ ಅತ್ತೆ ಮಾವನಿಗೆ 3 ಜನ ಗಂಡು ಮಕ್ಕಳು ಅವರೆಂದರೆ ಪ್ರವೀಣ, ಒಬ್ಬರು ತೀರಿಕೊಂಡಿರುತ್ತಾರೆ, ಅವರ ಅಣ್ಣ ಬಂದಿರಲಿಲ್ಲ ಏನಕ್ಕೂ ಬರುತ್ತಿರಲಿಲ್ಲ

ಆದ್ದರಿಂದ ಗೊತ್ತಿರಲಿಲ್ಲ. 3 ಜನ ಹೆಣ್ಣು ಮಕ್ಕಳು ಅವರೆಂದರೆ ಮುನಿರತ್ನಮ್ಮ, 2 ನೇಯವರ ಹೇಸರು ಗೊತ್ತಿಲ್ಲ, 3 ನೇಯವರು ನಾಗವೇಣಿ.

26) 3 ನೇಯವರನ್ನು ಎಲ್ಲಿ ಮದುವೆ ಮಾಡಿ ಕೊಟ್ಟಿರುತಾತರೆ ಎಂದರೆ ಸಾಕ್ಷಿಃಯು ಅವರು ಮದುವೆಗೆ ಬಂದಿಲ್ಲ ಹಾಗಾಗಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಎದುರುದಾರರ ಕುಟುಂಬದ ಪರಿಚಯ ನನಗಿಲ್ಲ . ಆದ್ದರಿಂದ ನನಗೇನು ಗೊತ್ತಿಲ್ಲ ಎಂದರೆ ಸರಿಯಲ್ಲ.

27) ಎದುರುದಾರರು ಸಲ್ಲಿಸಿರುವ ತಕರಾರುಗಳ ಬಗ್ಗೆ ನಾನು ಕೇಳಿ ತಿಳಿದುಕೂಂಡಿಲ್ಲ.

28) ನನಗೆ ನನ್ನ ಗಂಡ ಇಷ್ಟ ಎಂದು ಎಲ್ಲಾದರೂ ನಿಮ್ಮ ಅರ್ಜಿಯಲ್ಲಿ ಹೇಳಿರುತ್ತೀರಾ ಎಂದರೆ ಸಾಕ್ಷಿಯು ನಾನು ಬರೆಸಿಲ್ಲ ಎನ್ನುತ್ತಾರೆ.

29) ಮದುವೆ ವಿಚಾರ ಬಿಟ್ಟು ಉಳಿದೆಲ್ಲ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

30) ನನ್ನ ಹೊಂಡಾ ಕಂಪನಿಯಲ್ಲಿ ಕೆಲಸ ಮಾಡುತ್ತಿಲ್ಲ ಎಂದರೆ ಸರಿಯಲ್ಲ.

31) ಮದುವೆಯ ಕಾಲಕ್ಕೆ ಕರೋನಾ ಇತ್ತು. ಆದುದರಿಂದ ಎದುರುದಾರನು ಹೊಂಡಾ ಕಂಪನಿಯಲ್ಲಿ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ.

32) ನಿಮ್ಮ ಮುಖ್ಯ ವಿಚಾರಣೆ 2 ನೇ ಪ್ಯಾರಾದಲಿ ಹೇಳಿರುವ ಸಂಗತಿ ಸುಳ್ಳು ಎಂದರೆ ಸರಿಯಲ್ಲ.

33) ಎದುರುದಾರನು 1 ಹಸುವನ್ನು ಮೆಯಿಸಿಕೊಂಡು ಕೂಲಿ ನಾಲಿ ಮಾಡಿಕೊಂಡು ಬದುಕುತ್ತಿದ್ದಾನೆ ಎಂದರೆ ಸರಿಯಲ್ಲ.

34) ನಾನೇ ಸ್ವತಃ ನನ್ನ ಗಂಡನ ಮನೆಯನ್ನು ತೋರೆದು ತವರು ಮನೆಗೆ ಬಂದಿರುತ್ತೇನೆ ಎಂದರೆ ಸರಿಯಲ್ಲ.

35) ನಿಪಿ-1 ಪಿತ್ತಾರ್ಜಿತ ಆಸ್ತಿ ಎಂದರೆ ಸರಿ. ನಿಪಿ-1 ರ ಆಸ್ತಿಯ ಮೇಲೆ 3 ನೇ ಅಧಿಕ ದಿವಾಣಿ ನ್ಯಾಯಾಲಯದಲ್ಲಿ ಅಸಲು ದಾವಾ ಸಂ. 460/2021 ಅಂತ ದಾವೆ

ಚಾಲ್ತಿಯಲ್ಲಿರುತ್ತದೆ ಎಂದರೆ ಸರಿಯಲ್ಲ. ಈ ದಾವೆಯನ್ನು ನಿಮ್ಮ ಮಾವನ ತಂಗಿ ಹೂಡಿರುತ್ತಾಳೆ ಎಂದರೆ ಸರಿಯಲ್ಲ.

36) ನಿಮ್ಮ ಗಂಡನದ್ದು ಬಿ.ಪಿ.ಎಲ್ ಕಾಡುರ್ ಇದೆ ಎಂದರೆ ಸರಿಯಲ್ಲ. ಹಾಗಾಗಿ ಅವರಿಗೆ ಹೆಚ್ಚು ಆದಾಯ ಇಲ್ಲ ಎಂದರೆ ಸಾಕ್ಷಿಯು ಅವರು ಹೆಂಡತಿಯನ್ನು ಸಾಕಬಾರದು ಅಂತೆ ಏನಾದರೂ ಇದೆಯಾ ಸರ್ ಎನ್ನುತ್ತಾರೆ.

37) ದಿಃ 02.06.2023 ರಂದು ಈ ಪ್ರಕರಣ ಇತ್ತು ಎಂದರೆ ಸರಿ. ಆ ದಿನ ಪಕ್ಕದ ನ್ಯಾಯಾಲಯದಲ್ಲಿ ಪ್ರಕರಣ ಕರೆದಿದ್ದರು ಎಂದರೆ ಸರಿ. ಆ ದಿನ ನಾನು ಆರ್ಡರ್ ಶೀಟ್‌ಗೆ ಸಹಿ ಮಾಡಿದ್ದೇನೆ ಎಂದರೆ ಸರಿ. ಆ ದಿನ ನನ್ನ ಕಡೆಯವರು ಮತ್ತು ಎದುರುದಾರನ ಕಡೆಯವರು ಬಂದಿದ್ದರು ಎಂದರೆ ಸರಿ

38) ಆ ದಿನ ನಿಮ್ಮ ಗಂಡ ಪ್ರಕರಣವನ್ನು ಮುಗಿಸಿಕೊಂಡು ಹೊಗುತ್ತಿದ್ದಾಗ ಕೊಡಿಕೊಣ್ಣೂರು ಗ್ರಾಮದ ಹತ್ತಿರ ಬಸ್ ನಿಲ್ಲಿಸಿದ್ದಾಗ ನಾವು ಆತನನ್ನು ಕಿಡ್ನಾಪ್ ಮಾಡಿಸಿರುತ್ತೆವೆ ಎಂರೆ ಸರಿಯಲ್ಲ. ಈ ವಿಚಾರವಾಗಿ ನಿಮ್ಮ ಗಂಡನ ತಂದೆ ನನ್ನ ಮತ್ತು ನನ್ನ ಕುಟುಂಬಸ್ಥರ ಮೇಲೆ ದೂರನ್ನು ಠಾಣೆಯಲ್ಲಿ ಕೂಟ್ಟಿದ್ದರು ಎಂದರೆ ಸರಿ. ಆ ಪ್ರಕಾರ ಮೊಂಕದ್ದಮ್ಮೆ ಸಂ. 276/2023 ಅಂತ ಮೊಕದ್ದಮ್ಮೆ ದಾಖಲಾಗಿತ್ತು ಎಂದರೆ ಸಾಕ್ಷಿಯ ಅದು ಫೇಕ್ ಎನ್ನುತ್ತಾರೆ, ಇದೆನಾ ಆ ದಾಖಲೆ ಎಂದು ತೊರಿಸಿದ್ದು , ಸಾಕ್ಷಿಯ ಅದನ್ನು ನೋಡಿ ಒಪ್ಪಿಕೊಂಡಿದ್ದು ಸದರಿ ದಾಖಲೆಯನ್ನು ನಿಡಿ-3 ಎಂದು ಗುರುತಿಸಲಾಯಿತು. ಆ ಪ್ರಕರಣಕ್ಕೆ ಸಂಬಂದಿಸಿದಂತೆ ಪ್ರಕರಣ ನಡೆಯುತ್ತಿದೆ ಎಂದರೆ ಸರಿ.

39) ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಚಿಂತಾಮಣಿ ನ್ಯಾಯಾಲಯದಲ್ಲಿ ನಾನು ಎಂ.ಸಿ. ಸಂ. 79/2022 ರಂತೆ ವಿಚ್ಚೆದನ ಕೋರಿ ಪ್ರಕರಣ

ದಾಖಲಿಸಿರುತ್ತೇನೆ ಎಂದರೆ ಸರಿ. ಅದು ಚಾಲ್ತಿಯಲ್ಲಿದೆ ಎಂದರೆ ಸರಿ. ಆ ಅರ್ಜಿಯಲ್ಲಿ ನಾನು ನಿರ್ದಿಷ್ಟ ಕಾರಣ ಹೇಳಿಲ್ಲ ಎಂದರೆ ಸರಿಯಲ್ಲ.

40) 3 ದಿನಂಗಳ ಕಾಲ ಮಾತ್ರ ನೀವು ಇದ್ದದ್ದು ಅದ್ದರಿಂದ ನೀವು ಸಂಸಾರ ಮಾಡಿಲ್ಲ ಎಂದರೆ ಸಾಕ್ಷಿಯು ಎಂದೂವರೆ ತಿಂಗಳು ಇದ್ದೆ ಎನ್ನುತ್ತಾರೆ. ಈ ಪ್ರಕರಣಕ್ಕೆ ವ್ಯಾಜ್ಯ ಕಾರಣ ಇಲ್ಲ ಎಂದರೆ ಸರಿಯಲ್ಲ. ಸುಳ್ಳುಪ್ರಕರಣ ಹೂಡಿ ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲಃ</u>–**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.